1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ಆರೋಪಿಯನ್ನು ನ್ಯಾಯಾಲಯದ ವಿ.ಸಿ. ಮೂಲಕ ಹಾಜರು ಪಡಿಸಲಾಯಿತು.

ದಿನಾಂಕ ಃ 22.12.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ:30 ಪಿ. ಡಬ್ಲ್ಯೂ:23

| | |
|---|---|
| ಸಾಕ್ಷಿದಾರರ ಹೆಸರು | ಜೆ. ಮರೀಸ್ವಾಮಿ |
| ತಂದೆಯ ಹೆಸರು | ಜೋಗಯ್ಯ |
| ವಯಸ್ಸು | 56 ವರ್ಷ |
| ಉದ್ಯೋಗ | ಎಎಸ್ಐ, ಕೆ ಎಂ ದೊಡ್ಡಿ ಪೊಲೀಸ್ ಠಾಣೆ , ಮಂಡ್ಯ. |
| ವಾಸ | ಪಾಳ್ಯ ಗ್ರಾಮ, ಚಾಮರಾಜನಗರ. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ದಿಃ 16.06.2021 ರಿಂದ ದಿಃ 26.06.2025 ರವರಗೆ ಎಎಸ್ಐ ಆಗಿ ಬೆಳಕವಾಡಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 04.08.2022 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಪ್ರಾಸಾ. 20 ರವರು ಮೈಸೂರಿನ ಕೆ ಆರ್ ಆಸ್ಪತ್ರೆಯ ಸುಟ್ಟ ಗಾಯಗಳ ವಾರ್ಡಿನಲ್ಲಿ ದಾಖಲಾಗಿದ್ದ ಪ್ರಾಸಾ. 1 ರವರ ಹೇಳಿಕೆಯನ್ನು ಪಡೆದು ಠಾಣೆಗೆ ವಾಪಸ್ಸು ಬಂದು ಸದರಿ ಹೇಳಿಕೆಯನ್ನು ನನ್ನ ಮುಂದೆ ಹಾಜರಿಸಿದ್ದ ಮೇರೆಗೆ ಸದರಿ ಹೇಳಿಕೆಯ ಆಧಾರದ ಮೇರೆಗೆ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೂ ಮತ್ತು ನಮ್ಮ ಇಲಾಖಾ ಮೇಲಾಧಿಕಾರಿಗಳಿಗೂ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಹೇಳಿಕೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ.1 ಎಂದು ಈಗಾಗಲೇ ಗುರುತಿಸಲಾಗಿದ್ದು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ.50 ಎಂದು, ಸಾಕ್ಷಿಯ ಸಹಿಯನ್ನು ನಿಪಿ.50(ಎ) ಎಂದು ಗುರುತಿಸಲಾಯಿತು.

3. ಅದೇ ದಿನ ಆರೋಪಿಯ ಮನೆಯ ಹಾಲ್ ಗೆ ಪಂಚರನ್ನು ಬರಮಾಡಿಕೊಂಡು, ಪ್ರಾಸಾ.2 ಶಿವಣ್ಣ ರವರು ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮದಲ್ಲಿ ಮಹಜರ್ ಕ್ರಮವನ್ನು ಜರುಗಿಸಿರುತ್ತೇನೆ. ಮಹಜರ್ ಕಾಲದಲ್ಲಿ ದೊರತೆ ಒಂದು ಅರ್ಧ ಲೀಟರಿನ ಪ್ಲಾಸ್ಟಿಕ್ ಬಾಟಲ್ ನ್ನು ವಶಪಡಿಸಿಕೊಂಡಿರುತ್ತೇನೆ. ಸದರಿ ಬಾಟಲ್, ಬೆಂಕಿಯಿಂದ ಸುಟ್ಟಿದ್ದು ಸೀಮೆಎಣ್ಣೆ ವಾಸನೆ ಇದ್ದಿರುತ್ತದೆ. ಸ್ಥಳದಲ್ಲಿ ಬೆಂಕಿ ಪೊಟ್ಟಣ ದೊರೆತಿದ್ದು ಅದರಲ್ಲಿ 8 ರಿಂದ 10 ಬೆಂಕಿ ಕಡ್ಡಿಗಳು ಇದ್ದಿರುತ್ತವೆ. ಅದನ್ನು ಸಹ ವಶಪಡಿಸಿಕೊಂಡಿರುತ್ತೇನೆ. ಸುಟ್ಟಿರುವ ಒಂದು ಬಿಳಿ ಹೂವಿನ ಚಿತ್ರವಿರುವ ನೇರಳೆ ಬಣ್ಣದ ಒಂದು ಸೀರೆಯನ್ನು, ನೇರಳೆ ಬಣ್ಣದ ರವಿಕೆಯನ್ನು ಹಾಗೂ ಕೇಸರಿ ಬಣ್ಣದ ಒಂದು ಒಳಲಂಗವನ್ನು ಸ್ಥಳದಲ್ಲಿ ವಶಪಡಿಸಿಕೊಂಡಿರುತ್ತೇನೆ. ಒಂದು ಕಪ್ಪು ಬಣ್ಣದ ಜರ್ಕಿನ್ ನ್ನು ಸ್ಥಳದಲ್ಲಿ ವಶಪಡಿಸಿಕೊಂಡಿರುತ್ತೇನೆ. ಸ್ಥಳದಲ್ಲಿ ಇದ್ದ ಒಂದು ಬಿದಿರು ದೊಣ್ಣೆಯನ್ನು ವಶಪಡಿಸಿಕೊಂಡಿರುತ್ತೇನೆ, ಅದರ ತುದಿಗೆ ಬಟ್ಟೆಯನ್ನು ಕಟ್ಟಲಾಗಿತ್ತು. ಸದರಿ ಪ್ಲಾಸ್ಟಿಕ್ ಬಾಟಲ್ ನಿಂದ ಸೀಮೆಎಣ್ಣೆ ಹಾಕಿ ಸುಟ್ಟಿರುತ್ತಾರೆ ಎಂದು ಪ್ರಾಸಾ. 2 ರವರು ಮಾಹಿತಿ ನೀಡಿದ್ದರು. ಸದರಿ ವಶಕ್ಕೆ ಪಡೆದ ವಸ್ತುಗಳನ್ನು ಪಂಚರ ಸಮಕ್ಷಮದಲ್ಲಿ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಎಸ್ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿರುತ್ತೇನೆ. ಸದರಿ ಮಹಜರ್ ಕ್ರಮವನ್ನು ಸಂಜೆ 4.40 ರಿಂದ 5.40 ಗಂಟೆ ತನಕ ಮಾಡಿರುತ್ತೇನೆ. ಸಾಕ್ಷಿಯು ಸದರಿ ಮಹಜರನ್ನು ತೋರಿಸಲಾಗಿ, ಮಹಜರನ್ನು ಈಗಾಗಲೇ ನಿಪಿ.6 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಾಕ್ಷಿಯ ಸಹಿಯನ್ನು ನಿಪಿ.6(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ.7 ಮತ್ತು 8 ಫೋಟೋಗಳನ್ನು ತೋರಿಸಲಾಗಿ, ಸದರಿ ಫೋಟೋಗಳನ್ನು ಮಹಜರ್ ಕಾಲದಲ್ಲಿ ತೆಗೆಯಲಾಗಿದೆ ಎಂದು ಗುರುತಿಸಿರುತ್ತಾರೆ. ಸದರಿ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮುಮಾ.1-ಪ್ಲಾಸ್ಟಿಕ್ ಬಾಟಲ್, ಮುಮಾ.2- ಬೆಂಕಿ ಪೊಟ್ಟಣ, ಮುಮಾ.3 ಸೀರೆ, ಮುಮಾ.4 – ರವಿಕೆ, ಮುಮಾ.5 – ಒಳಲಂಗ, ಮುಮಾ.6-ಜರ್ಕಿನ್ ಮತ್ತು ಮುಮಾ.7-ದೊಣ್ಣೆಯನ್ನು ನೋಡಿ ಗುರುತಿರುತ್ತಾರೆ. ಸದರಿ ಮುಮಾ.1 ರಿಂದ 7 ಇಟ್ಟಿರುವ ಬಿಳಿಯ ಚೀಲದ ಮೇಲೆ ಅಂಟಿಸಲಾದ ಚೀಟಿಯಲ್ಲಿ ಇರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಮುಮಾ.1(ಡಿ), ಮುಮಾ.2(ಡಿ), ಮುಮಾ.3(ಡಿ), ಮುಮಾ.4(ಡಿ), ಮುಮಾ.5(ಡಿ), ಮುಮಾ.6(ಡಿ) ಮತ್ತು ಮುಮಾ.7(ಡಿ) ಎಂದು ಗುರುತಿಸಲಾಯಿತು.

4. ನಂತರ ಠಾಣೆಗೆ ವಾಪಸ್ಸು ಆಗಿ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ಮಾಲು ಪಟ್ಟಿಯಲ್ಲಿ ಅಳವಡಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

5. ಅದೇ ದಿನ ಸಾಕ್ಷಿದಾರರಾದ ಮಹದೇವಮ್ಮ - ಫ್ರಾಸಾ.3 ಮತ್ತು ಫ್ರಾಸಾ. 2 -ಶಿವಣ್ಣ ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಫ್ರಾಸಾ. 2 ರವರು ನಿಪಿ.9 ರಂತೆ ಮತ್ತು ಫ್ರಾಸಾ. 3 ರವರು ನಿಪಿ.13 ಮತ್ತು 14 ರಂತೆ ನನ್ನ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ.

6. ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಪಿ.ಎಸ್.ಐ. ರವರಿಗೆ ನೀಡಿರುತ್ತೇನೆ.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಕೆ ಟಿ ಎಸ್ ವಕೀಲರು ಃ Chief defence counsel ರವರಿಂದ ಃ**

7. ದಿಃ 04.08.2022 ಕ್ಕಿಂತ ಮೊದಲು ಈ ಪ್ರಕರಣದಲ್ಲಿ ದೂರು ಬಂದಿಲ್ಲ. ನಮ್ಮ ಪೊಲೀಸ್ ಠಾಣೆಯಿಂದ ನೆಟ್ಟಕಲ್ಲು ಗ್ರಾಮವು 13 ಕಿಮೀ ದೂರದಲ್ಲಿದೆ. ಸದರಿ ನೆಟ್ಟಕಲ್ಲು ಗ್ರಾಮಕ್ಕೆ ನಾನು ಮತ್ತು ನಮ್ಮ ಸಿಬ್ಬಂದಿ ನಿಂಗರಾಜು ರವರು ಹೋಗಿದ್ದೆವು. ಪಂಚರಿಗೆ ಸದರಿ ಸ್ಥಳ ಪಂಚನಾಮೆಗೆ ಹೋಗುವ ಮೊದಲು ನೋಟಿಸನ್ನು ನೀಡಿದ್ದೆನು. ಆ ದಿನ ಸಂಜೆ 4.30 ಗಂಟೆಗೆ ಪಂಚರಿಗೆ ನೋಟಿಸನ್ನು ಜಾರಿ ಮಾಡಿರುತ್ತೇನೆ. ಫ್ರಾಸಾ.2 ರವರು ಪಂಚರ ಹೆಸರು ಮತ್ತು ವಿಳಾಸಗಳನ್ನು ನೀಡಿದ್ದರು.

8. ಸದರಿ ಫ್ರಾಸಾ.1 ರವರ ಮನೆಯ ಬಾಗಿಲು ದಕ್ಷಿಣಕ್ಕೆ ಇರುತ್ತದೆ. ನಾವು ಸದರಿ ಮನೆಗೆ ಹೋದಾಗ, ಮನೆಯಲ್ಲಿ ಯಾರು ಇರಲಿಲ್ಲ, ಸದರಿ ಮನೆಯ ಬಾಗಿಲು ತೆರೆದಿತ್ತು. ಸ್ಥಳದಲ್ಲಿ ಮುಮಾ.1, ಮುಮಾ.2 ಮತ್ತು ಮುಮಾ.7 ಇರಲಿಲ್ಲ ಎಂದರೆ ಸರಿಯಲ್ಲ. ಸ್ಟವ್ ಅಪಘಾತದಿಂದ ಗಾಯಾಳುಗಳಿಗೆ ಸುಟ್ಟ ಗಾಯಗಳಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಶಪಡಿಸಿಕೊಂಡ ವಸ್ತುಗಳನ್ನು ಫ್ರಾಸಾ. 2 ಹಾಗೂ 3 ರವರು ಹಾಜರು ಪಡಿಸಿದ್ದರು. ಸದರಿ ಫ್ರಾಸಾ. 2 ಮತ್ತು 3 ರವರು ಯಾವುದೇ ವಸ್ತುಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ನಾವು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಮಹಜರನ್ನು, ಈ ಪ್ರಕರಣವನ್ನು ಸೃಷ್ಟಿಸುವ ಸಲುವಾಗಿ ತಯಾರು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.7 ಮತ್ತು 8 ಫೋಟೋಗಳಲ್ಲಿ, ಸದರಿ ಫೋಟೋಗಳನು ತೆಗೆದ ದಿನಾಂಕ ಮತ್ತು ಸಮಯ ನಮೂದು ಇಲ್ಲ ಎಂದರೆ ಸರಿ. ಸದರಿ ನಿಪಿ.7 ಮತ್ತು 8 ಫೋಟೋಗಳನ್ನು ಮೊಬೈಲ್ ಫೋನ್ ಮೂಲಕ ತೆಗೆಯಲಾಗಿದೆ. ಸದರಿ ನಿಪಿ.7 ಮತ್ತು

8 ಫೋಟೋಗಳನ್ನು ಪುಷ್ಪ ಸ್ಟುಡಿಯೋದಲ್ಲಿ ಪ್ರಿಂಟ್ ತೆಗೆದುಕೊಳ್ಳಲಾಗಿದೆ. ಈ ಬಗ್ಗೆ ರಶೀದಿ ಇರುವುದಿಲ್ಲ. ಫ್ರಾಸಾ.2 ಮತ್ತು 3 ರವರು ನನ್ನ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇರುವುದಿಲ್ಲ.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.